

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಮಾರಂಭಗಳ ಅಂತರಂಗ-ಬಹಿರಂಗ

ರಾಜ್ಯದ ನಾನಾ ಜಿಲ್ಲೆಗಳಿಂದ ಅನೇಕ ಪದವಿಪೂರ್ವಕಾಲೇಜುಗಳ ಸುಮಾರು ಮೂನ್ನೂರು ಜನ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿಜ್ಞಾನದ ವಿಷಯಗಳನ್ನು ವಿಶೇಷವಾಗಿ ಅಧ್ಯಯನ ಮಾಡಲು ಸಿರಿಗೆರೆಗೆ ಬಂದಿದ್ದರು. ಬೇಸಿಗೆ ರಜಾ ದಿನಗಳಲ್ಲಿ ಏರ್ಪಡಿಸಿದ್ದ ಸುಮಾರು ಎರಡೂವರೆ ತಿಂಗಳ ಅವಧಿಯ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿ ತಮ್ಮ ಅಧ್ಯಯನ ಮುಗಿಸಿಕೊಂಡು ಸ್ವಸ್ಥಾನಕ್ಕೆ ಹಿಂದಿರುಗುವ ಮುನ್ನ ನಮ್ಮ ದರ್ಶನಾಶೀರ್ವಾದ ಪಡೆಯಲು ಕಾತುರರಾಗಿದ್ದರು. ಮೊನ್ನೆ ಶಾಂತಿವನದ ಪ್ರಶಾಂತ ವಾತಾವರಣದಲ್ಲಿ ವಿದ್ಯಾರ್ಥಿಗಳ ಅನೌಪಚಾರಿಕ ಸಭೆ ಏರ್ಪಾಡಾಗಿತ್ತು. ವಾಡಿಕೆಯಂತೆ ಸಭೆಯ ಆರಂಭದಲ್ಲಿ ವಿದ್ಯಾರ್ಥಿನಿಯೊಬ್ಬಳು ತನ್ನ ಮಧುರಕಂಠದಿಂದ ಸುಶ್ರಾವ್ಯವಾಗಿ ಪ್ರಾರ್ಥನೆಯನ್ನು ಮಾಡಿದಳು.

**ನೀಡು ಶಿವ, ನೀಡದಿರು ಶಿವ**
**ಬಾಗುವುದು ಎನ್ನ ಕಾಯ..**

ಇದೊಂದು ಅರ್ಥಪೂರ್ಣವಾದ ಸಿನೆಮಾಹಾಡು. ಈ ಹಾಡು 'ಅಯ್ಯಾ ನೀನು ಕೇಳಿದರೆ ಕೇಳು, ಕೇಳದಿದ್ದರೆ ಮಾಣು, ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನು...!' ಎಂದು ವೀರವಿರಾಗಿಣಿ ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನನ್ನು ಕುರಿತು ಹೇಳಿದ ವಚನದ ಆಶಯಕ್ಕೆ ಹತ್ತಿರವಾಗಿದೆ. ಪ್ರಾರ್ಥನೆ ಮುಗಿಯುತ್ತಿದ್ದಂತೆಯೇ ಪ್ರಾಧ್ಯಾಪಕರೂ ಒಳಗೊಂಡಂತೆ ಎಲ್ಲ ವಿದ್ಯಾರ್ಥಿಗಳು ಜೋರಾಗಿ ಕರತಾಡನ ಮಾಡಿದರು.

ನಮ್ಮ ದೇಶದಲ್ಲಿ ಸಭೆ-ಸಮಾರಂಭಗಳನ್ನು ಪ್ರಾರ್ಥನೆಯೊಂದಿಗೆ ಆರಂಭಿಸುವುದು ಒಂದು ಶಿಷ್ಟಾಚಾರ. ಆದರೆ ಪ್ರಾರ್ಥನೆ ಮುಗಿದಾಕ್ಷಣ ಸಭಿಕರು ಚಪ್ಪಾಳೆ ತಟ್ಟುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ನಮ್ಮನ್ನು ಅನೇಕ ವರ್ಷಗಳಿಂದ ಕಾಡುತ್ತಾ ಬಂದಿದೆ. ಪ್ರಾರ್ಥನೆಯ ಉದ್ದೇಶವಾದರೂ ಏನು? ಚಪ್ಪಾಳೆ ಮೆಚ್ಚುಗೆಯ ಸಂಕೇತ. ಕ್ರೀಡಾಂಗಣದಲ್ಲಿ ಆಟಗಾರರು ಚೆನ್ನಾಗಿ ಆಡಿದರೆ ಚಪ್ಪಾಳೆ ತಟ್ಟುತ್ತಾರೆ. ಕ್ರಿಕೆಟ್ ಆಟದಲ್ಲಿ ಚೆಂಡನ್ನು ಬೌಂಡರಿ ದಾಟುವಂತೆ ಹೊಡೆದರೆ ಕ್ರೀಡಾಭಿಮಾನಿಗಳು ಸೀಟಿ ಹೊಡೆಯುತ್ತಾರೆ. ಹಾಗಾದರೆ ಆ ವಿದ್ಯಾರ್ಥಿನಿ ಪ್ರಾರ್ಥನೆ ಮಾಡಿದ್ದು ಯಾರ ಮೆಚ್ಚುಗೆಗಾಗಿ? ಸಭಿಕರ ಮೆಚ್ಚುಗೆಯನ್ನು ಪಡೆಯಲೋ ಅಥವಾ ದೇವರ ಮೆಚ್ಚುಗೆಯನ್ನು ಪಡೆಯಲೋ? ನುಡಿದರೆ 'ಲಿಂಗಮೆಚ್ಚಿ ಅಹುದಹುದೆನಬೇಕು' ಎನ್ನುತ್ತಾರೆ ಬಸವಣ್ಣನವರು. 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ, ವಿಠ್ಠಲನಾಮ ತುಪ್ಪವ ಬೆರೆಸಿ ಬಾಯಿ ಚಪ್ಪರಿಸಿರೋ!' ಎನ್ನುತ್ತಾರೆ ಪುರಂದರದಾಸರು.



ಪ್ರಾರ್ಥನೆಯನ್ನು ಮಾಡುವುದು ಸಭಿಕರ ಮೆಚ್ಚುಗೆಯನ್ನು ಗಳಿಸುವುದಕ್ಕಲ್ಲ; ದೇವರ ಒಲುಮೆಯನ್ನು ಗಳಿಸುವುದಕ್ಕಾಗಿ. ಕೈಗೊಳ್ಳುವ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ ಎಂದು ದೇವರನ್ನು ಬೇಡುವುದೂ ಉಂಟು. ಆದರೆ ನಾವು ಮಾಡುವ ಪ್ರಾರ್ಥನೆ ಅಂತರ್ಮುಖಿಯಾಗಬೇಕೇ ಹೊರತು ಬಹಿರ್ಮುಖಿಯಾಗಬಾರದು. ಅಂತರಂಗ ಸಾಧನೆಯ ದಾರಿಯನ್ನು ಕ್ರಮಿಸಿ ಪರಿಶುದ್ಧಮನಸ್ಕರಾದಾಗ ಮಾತ್ರ ದೇವರು ಮೆಚ್ಚಿ ಅಹುದಹುದೆನ್ನಲು ಸಾಧ್ಯ. ಉತ್ತಮ ಭಾಷಣಕ್ಕೋ, ಉತ್ತಮ ಹಾಡುಗಾರಿಕೆಗೋ, ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮೆಚ್ಚಿಕೊಂಡೋ ಚಪ್ಪಾಳೆ ತಟ್ಟಿದಂತೆ ಪ್ರಾರ್ಥನಾ ಗೀತೆಗೂ ಚಪ್ಪಾಳೆ ತಟ್ಟಿದರೆ ಅದು ಪ್ರಾರ್ಥನೆಯಾಗಿ ಉಳಿಯುವುದಿಲ್ಲ, ಅದೊಂದು cultural event ಆಗಿಬಿಡುತ್ತದೆ. ಜಗತ್ತಿನ ಎಲ್ಲ ಧರ್ಮಗಳಲ್ಲಿಯೂ ವಿಭಿನ್ನ ಪ್ರಾರ್ಥನಾ ಪದ್ಧತಿಗಳು ಇವೆಯಾದರೂ ಅವುಗಳ ಮೂಲ ಆಶಯ ಒಂದೇ. ಪ್ರಾರ್ಥನೆ ಮನರಂಜನೆಯನ್ನುಂಟುಮಾಡುವ ಸಾಂಸ್ಕೃತಿಕ ಕಾರ್ಯಕ್ರಮವಲ್ಲ, ಮನೋವಿಕಾಸಕ್ಕೆ ಅನುವುಮಾಡಿಕೊಡುವ ಅಧ್ಯಾತ್ಮಿಕ ಸಾಧನೆಯ ಮೆಟ್ಟಿಲು. "Seven days without prayer makes one weak" ಎಂಬ ಮಾರ್ಮಿಕ ನುಡಿಯೊಂದು ಆಂಗ್ಲಭಾಷೆಯಲ್ಲಿದೆ. ಇದು ಏಳು ದಿನಗಳುಳ್ಳ ವಾರವನ್ನು (week) ಕುರಿತು ಹೇಳಿದ ಮಾತಲ್ಲ; ಮನುಷ್ಯನ ದುರ್ಬಲ ಮನಸ್ಸನ್ನು (weak mind) ಕುರಿತು ಹೇಳಿದ ಮಾತು. "ಎನಗೆ ನಿಮ್ಮ ನೆನಹಾದಾಗಲೇ ಉದಯ, ಎನಗೆ ನಿಮ್ಮ ಮರಹಾದಾಗಲೇ ಅಸ್ತಮಾನ" ಎನ್ನುತ್ತಾರೆ ಬಸವಣ್ಣನವರು.

ನಿಮ್ಮ ಮನಸ್ಸಿನಲ್ಲಿ ನೈಜ ಪ್ರಾರ್ಥನೆಯ (prayer) ಭಾವ ತುಂಬಿಕೊಂಡಿದ್ದರೆ, ಅದರಲ್ಲಿ ತನ್ಮಯತೆ ಇದ್ದರೆ ಚಪ್ಪಾಳೆ ತಟ್ಟಲು ಮನಸ್ಸು ಬರುವುದಿಲ್ಲ. ಚಪ್ಪಾಳೆ ತಟ್ಟಿದರೆ ಪ್ರಾರ್ಥನೆಯ ಆಶಯಕ್ಕೇ ಕುಠಾರಪ್ರಾಯವಾಗುತ್ತದೆ. ಸಭೆ-ಸಮಾರಂಭಗಳಲ್ಲಿ ಒಳೆಯ ಭಾಷಣದ ನಂತರ ಮೆಚ್ಚುಗೆಯ ಚಪ್ಪಾಳೆ ತಟ್ಟಿದಂತೆ ಪ್ರಾರ್ಥನೆಯ ನಂತರವೂ ಚಪ್ಪಾಳೆ ತಟ್ಟುವುದು ಜನರಿಗೆ ಅಭ್ಯಾಸವಾಗಿಬಿಟ್ಟಿದೆ. ಸಾಮಾನ್ಯವಾಗಿ ಅನೇಕ ಸಭೆ ಸಮಾರಂಭಗಳಲ್ಲಿ ಕಂಡುಬರುವ ಒಟ್ಟಾರೆ ದೋಷವಿದು. ಚಪ್ಪಾಳೆ ಎಲ್ಲ ಸಂದರ್ಭಗಳಲ್ಲೂ ಮೆಚ್ಚುಗೆಯ ಸೂಚಕವಾಗಿರುತ್ತದೆಯೆಂದು ಹೇಳಲಾಗುವುದಿಲ್ಲ, ನೀರಸ ಭಾಷಣದಿಂದ ರೋಸಿಹೋದ ಶ್ರೋತೃಗಳ ಚಡಪಡಿಕೆಯ ದ್ಯೋತಕವೂ ಆಗಬಹುದು.

ಒಳ್ಳೆಯ ಭಾವನೆಯಿಂದ ಹುಟ್ಟಿದ ಪದ್ಧತಿಯು ಕ್ರಮೇಣ ಕೇವಲ ಶಿಷ್ಟಾಚಾರವಾಗಿ ಪರಿಣಮಿಸುತ್ತದೆ; ಮೂಲ ಆಶಯವನ್ನು ಕಳೆದುಕೊಂಡು ಶುಷ್ಕವಾಗುತ್ತದೆ. ಇದಕ್ಕೆ ಉತ್ತಮವಾದ ಉದಾಹರಣೆಯೆಂದರೆ ಸಭೆ ಸಮಾರಂಭಗಳಲ್ಲಿ ಗಣ್ಯವ್ಯಕ್ತಿಗಳು ಅಲಂಕರಿಸುವ ಅಧ್ಯಕ್ಷ ಸ್ಥಾನ. ಹಿಂದಿನ ಕಾಲದಲ್ಲಿ ಸಭಾಧ್ಯಕ್ಷರು ಸಭೆಯ ಕಾರ್ಯಕಲಾಪಗಳು ಸಾಂಗವಾಗಿ ನೆರವೇರುವಂತೆ ನಿಯಂತ್ರಿಸುತ್ತಿದ್ದರು. ಯಾರು ಯಾವಾಗ ಎಷ್ಟು ಹೊತ್ತು ಮಾತನಾಡಬೇಕೆಂದು ಅತಿಥಿಗಳಿಗೆ ಸೂಚಿಸುತ್ತಿದ್ದರು. ಈಗ ಅವರು ಕೇವಲ ಸಭಾಭೂಷಣರಾಗಿ ಸುಮ್ಮನೆ ಕುರ್ಚಿಗೆ ಅಂಟಿಕೊಂಡು ಕುಳಿತುಕೊಂಡಿರುತ್ತಾರೆ. ಸಭಿಕರನ್ನು ನಿಯಂತ್ರಿಸುವ ಗೋಜಿಗೆ ಹೋಗುವುದಿಲ್ಲ; ಭಾಷಣಕಾರರು ಹೆಚ್ಚು ಹೊತ್ತು ಎಳೆಯದಂತೆ ಬ್ರೇಕು ಹಾಕುವುದೂ ಇಲ್ಲ. ಈಗ ಅದೇನಿದ್ದರೂ ಕಾರ್ಯಕ್ರಮದ ನಿರೂಪಕನ ಜವಾಬುದಾರಿ ಎಂಬಂತಾಗಿದೆ. ಈ ನಿರೂಪಕ ಬಹುಮಟ್ಟಿಗೆ ಶಾಲಾಕಾಲೇಜಿನ ಅಧ್ಯಾಪಕನಾಗಿದ್ದು ಸಭೆಯ ಉದ್ದಕ್ಕೂ ಅವನು ಮಾಡುವ ನಿರೂಪಣೆಯು ಒಂದು ರೀತಿಯಲ್ಲಿ ಕ್ರಿಕೆಟ್ ಮೈದಾನದ 'ರನ್ನಿಂಗ್ ಕಾಮೆಂಟ್ರಿ'ಯಂತಿದ್ದು ಬರೋಬ್ಬರಿ ಶಾಲಾತರಗತಿಯಲ್ಲಿನ ಒಂದು ಗಂಟೆಯ ಪೀರಿಯಡ್ ಆಗಿರುತ್ತದೆ.

ಇನ್ನು ಸಭೆಯ ಅವಿಭಾಜ್ಯ ಅಂಗವಾಗಿ ನಡೆಯುವ ಸನ್ಮಾನಗಳು. ಯಾವುದಾದರೂ ಉನ್ನತ ಸಾಧನೆ ಮಾಡಿದವರನ್ನು ಸನ್ಮಾನಿಸುವುದು; ಅವರಿಗೆ ಶಾಲು, ಹಾರ, ಹಣ್ಣು, ಸ್ಮರಣಿಕೆ ಅರ್ಪಿಸುವುದು ಸರಿಯೇ. ಸಮಾರಂಭಕ್ಕೆ ಬಂದ ಅತಿಥಿಗಳನ್ನು ಸಭೆಯಲ್ಲಿ ಸನ್ಮಾನಿಸುವುದೂ ಸರಿಯೆ. ಆದರೆ ಸಮಾರಂಭದ ಕಾರ್ಯಕರ್ತರನ್ನೂ ಸನ್ಮಾನಿಸುವ ಪದ್ಧತಿ ಈಗ ಕಾಲಿಟ್ಟಿದೆ. ಮುಖ್ಯ ಅತಿಥಿಗಳು ತಾವು ಸನ್ಮಾನ ಪಡೆಯುವುದಕ್ಕಿಂತ ಹೆಚ್ಚಾಗಿ ತಮ್ಮ ಮುಂದೆ ಸಾಲುಗಟ್ಟಿ ಬರುವ ಸಮಾರಂಭದ ಸಂಘಟಕರನ್ನೇ ಸನ್ಮಾನಿಸುವಂತಾಗಿದೆ. ಕೊನೆಯ ಸಾಲಿನ ಸಂಘಟಕನನ್ನೂ ಸಹ ಸನ್ಮಾನಿಸದೆ ಬಿಡುವಂತಿಲ್ಲ! ಅಚಾತುರ್ಯದಿಂದ ಹಾಗೆ ಆಯಿತೋ ಅವರಿಗೆ ಕೆಂಡಾಮಂಡಲ ಕೋಪ. ಎಷ್ಟೇ ಕಷ್ಟಪಟ್ಟು ಗುರುತಿಸಿದರೂ ಲಿಸ್ಟಿಗೆ ಸೇರಿಸಲು ಸಾಧ್ಯವಾಗದೆ ಕೆಲವರು ಉಳಿದು ಬಿಡುತ್ತಾರೆ. ಅಂತಹವರು ವಿಧಾನ ಸಭೆಯಲ್ಲೊ ಪಾರ್ಲಿಮೆಂಟಿನಲ್ಲೋ ಸಭಾತ್ಯಾಗ ಮಾಡಿ ಹೊರನಡೆವ ವಿರೋಧ ಪಕ್ಷದವರಂತೆ ಸಮಾರಂಭವನ್ನೇ ಬಹಿಷ್ಕರಿಸಿ ಹೋಗುವುದನ್ನು ನೀವು ನೋಡಬಹುದು. ಗಂಟೆಗಟ್ಟಲೆ ನಡೆಯುವ ಈ ಮಾನ-ಸಮ್ಮಾನಗಳನ್ನು 'ಸಾಕ್ಷೀಭೂತ'ರಾಗಿ ನೋಡುತ್ತಾ ಕುಳಿತ ಸಭಿಕರ ತಾಳ್ಮೆ ನಮ್ಮಲ್ಲಲ್ಲದೆ ಬೇರೆ ಯಾವ ದೇಶದಲ್ಲೂ ಕಂಡುಬರುವುದಿಲ್ಲ.

ಸಹೃದಯ ಓದುಗರೇ! ಜನರ ಕಷ್ಟಸುಖಗಳಿಗೆ ಸ್ಪಂದಿಸದೆ ಸಭೆ-ಸಮಾರಂಭಗಳಲ್ಲಿ ಕೇವಲ ಭಾಷಣ ಬಿಗಿಯುವ ನಮ್ಮ ದೇಶದ ರಾಜಕೀಯ ಧುರೀಣರಿಗೆ 'ಭಾಷಣ ತೆರಿಗೆ'ಯನ್ನು ವಿಧಿಸಿದರೆ ಬೇರಾವ ತೆರಿಗೆಯ ಅವಶ್ಯಕತೆಯೂ ಬೀಳಲಾರದು!

24.5.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑